3) ಕೌಟುಂಬಿಕ ಕಲಹದಿಂದಾಗಿ ದಿಕ್ಕು ತಪ್ಪಿದ ಮಹಿಳೆಯರಿಗೆ ತಾತ್ಕಾಲಿಕ ನೆಲೆಯನ್ನು ಒದಗಿಸುವುದು.

ಸರ್ಕಾರಿ ಕಛೇರಿಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೂ ಸೂಕ್ತ ಸಹಾಯವನ್ನು ನೀಡುವುದು ಸಹ ಈ ಸಹಾಯವಾಣಿಯ ಉದ್ದೇಶವಾಗಿದೆ. ಈ ಮಹಿಳೆಯರೂ ಯಾವುದೇ ರೀತಿಯ ಶೋಷಣೆ, ಹಿಂಸೆಯ ಬಗ್ಗೆ ದೂರನ್ನು ನೀಡಬಹುದು. ಅಂತಹ ದೂರುಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಸಂಸದರಿಗೆ ಸೌಲಭ್ಯ.

995(1301) ಶ್ರೀ ಶಿವಾನಂದ ನಾಯಕ (ಬಟ್ಕಳ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯದ ಸಂಸತ್ ಸದಸ್ಯರುಗಳಿಗೆ ರಾಜ್ಯ ಸರ್ಕಾರವು ಒದಗಿಸಿರುವ ಸೌಲಭ್ಯಗಳು ಯಾವುವು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :—

ಅ) ದಿನಾಂಕ 26-06-1993ರ ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 153 ಶಿವಾನೀ 93 ರಲ್ಲಿ ಸಂಸತ್ ಸದಸ್ಯರುಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ.

1) ಸಂಸತ್ ಸದಸ್ಯರುಗಳು ಸಂದರ್ಶನ ಮತ್ತು ಕಾರ್ಯಕಲಾಪಗಳನ್ನು ನಿರ್ವಹಿಸಲು ಒಂದು ಕೊಠಡಿ;

2) ಒಬ್ಬ ಶೀಘ್ರಲಿಪಿಗಾರರು;

3) ವಾಹನ ಹಾಗೂ ವಾಹನ ಚಾಲಕರು.

ವಿದ್ಯುತ್ ಸಂಪರ್ಕ ಸಕ್ರಮ.

996(783) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅಕ್ರಮ ವಿದ್ಯುತ್ ಸಂಪರ್ಕಗಳನ್ನು ಯಾವ ದಿನಾಂಕದವರೆಗೆ ಸಕ್ರಮಗೊಳಿಸಲಾಗುವುದು, ಇದರಿಂದ ಸರ್ಕಾರಕ್ಕೆ ಆದ ನಷ್ಟ ಅಥವಾ ಲಾಭವೆಷ್ಟು?

ಆ) ಈ ರೀತಿ ಅಕ್ರಮ ಸಂಪರ್ಕಗಳನ್ನು ಸಕ್ರಮಗೊಳಿಸುವುದರಿಂದ ವಿದ್ಯುತ್ ಸಂಪರ್ಕ ವ್ಯವಸ್ಥೆಗಳಲ್ಲಿ ಆಗುವ ತೊಂದರೆಗಳ ಬಗ್ಗೆ ಸರ್ಕಾರ ವಹಿಸಿರುವ ಪರ್ಯಾಯ ವ್ಯವಸ್ಥೆಗಳೇನು?